ಸಿಸಿನಂ. 679/2018

ಪಿಡಬ್ಲ್ಯೂ: 2

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,</u>

<u>ಕುಮಟಾ.</u>

ಸಿಸಿ ನಂ. 679/2018

ಪಿಡಬ್ಲೂ : 2

ಹೆಸರು : ಶ್ರೀ ನಾರಾಯಣ

ತಂದೆಯ ಹೆಸರು : ಗೋವಿಂದ ಗೌಡ

ವಯಸ್ಸು : 62 ವರ್ಷ

ಉದ್ಯೋಗ : ನಿವೃತ್ತ ಎ ಎಸ್ ಐ, ಕುಮಟಾ

ವಾಸ್ತವ್ಯ : ಕುಮಟಾ

ಸತ್ಯ ಪ್ರತಿಜ್ಞೆಯ ಮೇರೆಗೆ : ದಿನಾಂಕ 11-12-2025 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ : ದಂಡ ಪ್ರಕ್ರೀಯೆ ಸಂಹಿತೆ ಕಲಂ 299 ರಡಿಯಲ್ಲಿ ಪಿರ್ಯಾದುದಾರರ ಪರವಾಗಿ :</u>**

**ಅವರ <u>ವಕೀಲರಿಂದ :</u>**

ದಿಃ 30-06-2022 ರಿಂದ 31-05-2023 ರ ತನಕ ನಾನು ಕುಮಟಾ ಆರಕ್ಷಕ ಠಾಣೆಯಲ್ಲಿ ಎ ಎಸ್ ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿಃ 14-07-2022 ರಂದು ಸಿಪಿಐ ಕುಮಟಾ ರವರ ಆದೇಶದ ಮೇರೆಗೆ ಸಿಸಿ ನಂ . 679/2018 ರಲ್ಲಿ ನಮೂದಿಸಿದ ಶ್ರೀಮತಿ ಫಾತಿಮಾ ಅಬು ಖಾನ ಹುಬ್ಬಳ್ಳಿ ಇವರಿಗೆ ಪ್ರೊಕ್ಲಮೇಶನ್ ವಾರಂಟನ್ನು ಜಾರಿ ಮಾಡಿ ವರದಿ ನೀಡಲು ತಿಳಿಸಿದಂತೆ ಸದರಿ ಸ್ಥಳಕ್ಕೆ ಹೋಗಿ ಪಂಚರಾದ ಚನ್ನಬಸಪ್ಪ ಕೆಳಗೆರಿ ಹಾಗೂ ಚಂದ್ರಹಾಸ ಶಾಂತಪ್ಪ ಇವರನ್ನು ಬರ ಮಾಡಿಕೊಂಡು ಪಂಚನಾಮೆ ಬರೆದುಕೊಡಲು ತಿಳಿಸಿದಂತೆ ಅವರು ಅದಕ್ಕೆ ಒಪ್ಪಿಕೊಂಡು ಪಂಚನಾವೆಯನ್ನು ತಯಾರಿಸಿ ಕೊಟ್ಟಿರವತ್ತಾರೆ. ಉಧ್ಘೊಷಣಾ ಪತ್ರದ ಒಂದು ಪ್ರತಿಯನ್ನು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯ ನೋಟಿಸ್ ಬೋರ್ಡ ಸಾರ್ವಜನಿಕರಿಗೆ

ಕಾಣುವ ರೀತಿಯಲ್ಲಿ ಅಂಟಿಸಿದೆನು. ಅಲ್ಲಿಂದ ತಹಶೀಲ್ದಾರ ಕಾರ್ಯಾಲಯ ಹುಬ್ಬಳ್ಳಿಗೆ ಹೋಗಿ ಅಲ್ಲಿಯೂ ಸಹ ನೋಟಿಸ್ ಬೋರ್ಡ ಗೆ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಅಂಟಿಸಿದೆನು . ಅಲ್ಲಿಂದ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಗೆ ಹೋಗಿ ಮಹಾನಗರ ಪಾಲಿಕೆಯ ಕಟ್ಟಡದ ಎದುರಿನ ನೋಟಿಸ್ ಬೋರ್ಡ ಮೇಲೆ ಉಧ್ಘೋಷಣಾ ಪ್ರತಿಯನ್ನು ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ನೋಟಿಸನ್ನು ಗೋಡೆಗೆ ಅಂಟಿಸಿರುತ್ತೇನೆ. ಅಲ್ಲಿಂದ ಹೋಸೂರು ಪ್ರಾದೇಶಿಕ ಬಸ್ ನಿಲ್ದಾಣಕ್ಕೆ ಹೋಗಿ ಕಂಟ್ರೋಲ್ ರೂಮ್ ನ ಎದುರುಗಡೆ ಉಧ್ಘೋಷಣಾ ಪ್ರತಿಯನ್ನು ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ನೋಟಿಸನ್ನು ಗೋಡೆಗೆ ಅಂಟಿಸಿರುತ್ತೇನೆ. ಪಂಚನಾಮೆಯನ್ನು 16.00 ಗಂಟೆಯಿಂದ 17.00 ಗಂಟೆಯವರೆಗೆ ತಯಾರಿಸಲಾಯಿತು. ನಂತರ ಠಾಣೆಗೆ ಬಂದು ಉಧ್ಘೋಷಣಾ ಪ್ರತಿಯನ್ನು ಜಾರಿ ಮಾಡಿದ ಬಗ್ಗೆ ಮಾನ್ಯ ಸಿ.ಪಿ.ಐ ರವರಿಗೆ ವರದಿ ಮಾಡಿಕೊಂಡಿರುತ್ತೇನೆ. ಸಾಕ್ಷಿ ಸ್ಥಳದಲ್ಲಿ ತಯಾರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಪಂಚರ ಸಹಿಯನ್ನು ನಿಪಿ-7(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರೊಕ್ಲಮೇಶನ್ ವರದಿಯನ್ನು ನೋಡಿ ಗುರುತಿಸಿದ್ದು ನಿಪಿ-8 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ ಇದೆ.
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.